ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 21, ಸ॥ 1909.

II ನ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ತಾರೀಖು 22ನೆ ಡಿಸೆಂಬರು 1908.

ಸ॥1907ನೆ ಇಸವಿ ಡಿಸೆಂಬರು 7ನೆ ಮುರ್ಕುಂ 77ನೆ ನಂಬರು ರೂಲ್ ಆಫ್ ಪ್ರಾಕ್ಟೀಸ್ಸಿನ ತಿದ್ದುಪಾಟು.

ಸದರಿ ರೂಲ್ ಆಫ್ ಪ್ರಾಕ್ಟೀಸ್ ಅರ್ಪಡಿಕ್ಸ್ 'ಡಿ' ಯಲ್ಲಿ ಕಂಡುಬರುವ ಹಾಲೀ ಪಟ್ಟಿಗೆ ಬದಲಾಗಿ ಈ ಕೆಳಗೆ ನವೂದಿಸಿರುವ ಪಟ್ಟಿಯನ್ನು ಪ್ರತ್ಯಾಮ್ನಾಯವಾಗಿ ಉಪಯೋಗಿಸಬೇಕೆಂದು ಚೀಫ್ ಕೋರ್ಟ್‌ನವರು ಆಜ್ಞಾಪಿಸುತ್ತಾರೆ :—

ನಂಬರು.	ಕೋರ್ಟಿನ ರಿಜಿಸ್ಟರುಗಳು, ಪುಸ್ತಕಗಳು ಮತ್ತು ಕಾಗದಗಳ ವಿವರಣೆ.	ರಿಜಿಸ್ಟರುಗಳು ಮೊದಲಾದವುಗಳನ್ನು ನಿಲ್ಲಿಸಿ ಕೊಳ್ಳಬೇಕಾದ ಸಂವತ್ಸರಗಳ ಅವಧಿ.
1	ರದ್ದು ಮಾಡಲ್ಪಟ್ಟಿರುವ ಆಕ್ಟ್ಸುಗಳು ಅಥವಾ ರೆಗ್ಯುಲೇಷ್ಸುಗಳು ...	ಖಾಯಂ
2	ಕ್ಯಾಷ್ ಬುಕ್ಕು ಮತ್ತು ಲೆಡ್ಜರು.	10
3	ಅಸಲು ಮೊಕದ್ದಮೆಗಳ ಮತ್ತು ಅಪೀಲುಗಳ ರಿಜಿಸ್ಟರು	ಖಾಯಂ
4	ಕಾಪೀಸ್ಟ್ ರಿಜಿಸ್ಟರುಗಳು ಮತ್ತು ಪ್ರೋಸೆಸ್ ನಾಕರರ ರಿಜಿಸ್ಟರುಗಳು ...	3
5	ಇತರ ರಿಜಿಸ್ಟರುಗಳು	
	ಕ್ಯಾಷ್‌ಬುಕ್ಕು ಮತ್ತು ಲೆಡ್ಜರ್ ಅಲ್ಲದ ಇತರ ಅಕೌಂಟು ಬುಕ್ಕುಗಳು ...	
	ಕಕ್ಷಿಗಾರರಿಗೆ ದಸ್ತೈವಜಗಳನ್ನು ವಾಪಸು ಮಾಡುವ ಬಗ್ಯೆ ಇಡಲ್ಪಟ್ಟ ರಸೀತಿ ಬುಕ್ಕುಗಳು.	
	ಸ್ಟೇಷನರಿ ಲೆಖ್ಖಗಳು	3
	ಟಪ್ಪಾಲು ಹಾಸೆಲುಗಳ ಲೆಖ್ಖ	
	ಜುರ್ಮಾನೆಗಳ ಮತ್ತು ದಂಡಗಳನ್ನು ತೋರಿಸುವ ಲೆಖ್ಖ	
	ಸಾದಲ್ವಾರು ಬಿಲ್ಲುಗಳು ಮತ್ತು ರಿಜಿಸ್ಟರುಗಳು	
	ಜಪ್ತಿ ಆದ ಚರ ಸ್ಥಿರ ಸ್ವತ್ತುಗಳ ರಿಜಿಸ್ಟರು	
	ಕಮಿಷ್ಟಗಳು ಕೊಟ್ಟದ್ದನ್ನು ತೋರಿಸುವ ರಿಜಿಸ್ಟರು	
6	ಚಲ್ಲ ಮತ್ತು ಚಕ್ ಬುಕ್ಕುಗಳು	10
7	ಮೇಜಿಸ್ಟ್ರೇಟರ ಕೋರ್ಟಿನ "ಇಂದಾ" "ಗೆ" ಕಾಗದಗಳನ್ನು ಬಾರ್ ಮಾಡುವ ರಿಜಿಸ್ಟರುಗಳು.	5

ನಂಬರು.	ಕೋರ್ಟಿನ ರಿಜಿಸ್ಟರುಗಳು, ಪುಸ್ತಕಗಳು ಮತ್ತು ಕಾಗದಗಳ ವಿವರಣೆ.	ರಿಜಿಸ್ಟರುಗಳು ಮೊದಲಾದವುಗಳನ್ನು ನಿಲ್ಲಿಸಿಕೊಳ್ಳಬೇಕಾದ ಸಂವತ್ಸರಗಳ ಅವಧಿ.
8	ಇತರ ಕೋರ್ಟು ಅಥವಾ ಆಫೀಸು ಪುಸ್ತಕಗಳು ಮತ್ತು ರಿಜಿಸ್ಟರುಗಳು ...	3
9	ಮೈಸೂರು ಗೆಜೆಟ್	ಖಾಯಂ
10	ಇತರ ಗೆಜೆಟ್ಟುಗಳು, ಬಂದಿದ್ದರೆ	3
11	ಮೇಲೆ ಹೇಳಲ್ಪಟ್ಟವುಗಳು ಅಥವಾ ಮುಂದೆ ವಿಧಾಯಕವಾಗ ವುಗಳು ವಿನಹಾ ಇತರ ಚೀಫ್ ಕೋರ್ಟು ಮತ್ತು ಗಾರ್ನಮೆಂಟಿನಿಂದ ಬಂದ ಕಾಗದಗಳು ಮತ್ತು ಹುಕುಂಗಳು. ಅಡ್ಮಿನಿಸ್ಟ್ರೇಷ್ ರಿಪೋರ್ಟುಗಳು.	20
12	ಪೂರೈಸಿದ ಸಂಗತಿಗಳ ವಿಷಯವಾಗಿ ನಡದ ಇತರ ಆಫೀಸಿಗೆ ಸಂಬಂಧಪಟ್ಟ ಕಾಗದಗಳು.	3
13	ಸಾಲೀಯಾನಾ ಮತ್ತು ಚಷ್ಮಾಹೆ ತಃಖ್ತೆಗಳು	5
14	ಮಾಹೇಯಾನ ಮತ್ತು ಮೂರು ತಿಂಗಳೆ ತಃಕ್ತೆಗಳು ಟಪ್ಪಾಲು ಹಾಸಲು ಮತ್ತು ದಂಡಗಳನ್ನು ತೋರಿಸುವ ಲೆಖ್ಖಗಳು ಸಹಾ.	3
15	ರಜಾ ಬಗ್ಗೆ ಕೊಟ್ಟ ದರಖಾಸ್ತುಗಳು ಮತ್ತು ಅವುಗಳ ಮೇಲೆ ಆದ ಆರ್ಡರು ನೌಕರಿ ಬಗ್ಗೆ ಉಮೇದಾರರಿಂದ ಬಂದ ಅರ್ಜಿಗಳು ಮತ್ತು ಕೋರ್ಟು ನಡವಳಿಕೆಗೆ ಸಂಬಂಧವಿಲ್ಲದ ಅರ್ಜಿಗಳ ಮೇಲೆ ಆದ ರಿಪೋರ್ಟುಗಳು.	1
16	ಮೇಜಿಸ್ಟ್ರೇಟರಿಗೆ ಸಂಬಂಧಪಟ್ಟ ಡೈರಿಗಳು, ಪೋಲೀಸ್ ದಸ್ತಗಿರಿ ಸ್ಟೇಟ್‌ಮೆಂಟುಗಳು, ಪೋಲೀಸು ಅಕರ್ತಸು ರಿಪೋರ್ಟುಗಳು (1ನೆ ಭಾಗಕ್ಕೆ ಸೇರಿದವುಗಳು ಮತ್ತು ಅಸಹಜವಾದ ಮತ್ತು ಆಕಸ್ಮಿಕವಾದ ಮರಣಗಳ ಪೋಲೀಸ್ ರಿಪೋರ್ಟುಗಳು ವಿನಹ).	3
17	ಅರ್ಜಿಗಳ ರಿಜಿಸ್ಟರು	12
18	ಬರಾವರ್ದುಗಳು	35

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್

ಫಾರೆಸ್ಟು ಇಲಾಖೆ.

ನೋಟಿಸು.

ಕೋಲಾರ ಡಿಸ್ಟ್ರಿಕ್ಟ್ಯ ಮಾಲೂರು ರೇಂಜಿಗೆ ಸೇರಿದ ಪರ್ಮನೆಂಟ್ ರಿಸರ್ವ್‌ಗಳಲ್ಲಿ ವಣಗಿದ ಕ್ಯಾಸರೀನಾ ಕಟ್ಟಿಗೆ ಹರಾಜು ವಿಷಯದಲ್ಲಿ, 1909ನೆ ಇಸವಿ ಜನವರಿ 14ನೆ ಮಕ್ರುಂನ ಮೈಸೂರು ಗೆಜೆಟ್ 2ನೆ ಭಾಗದ 14ನೆ ನಂಬರು ಪುಟದಲ್ಲಿ ಫಾಯಿಷಾಗಿರುವದಕ್ಕೆ ಎಲ್ಲರೂ ನಿಗಾ ಕೊಡತಕ್ಕದ್ದು.

ಎಚ್. ರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ಬೆರಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಖಾಯಂಗುತ್ತಾ ಲಕ್ಕೇನಹಳ್ಳಿ ಗ್ರಾಮವು 1909ನೆ ಇಸವಿ ಮಾರ್ಚ್ 23ನೆ ತಾರೀಖಿನಲ್ಲಿ ನಲಮಂಗಲ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ—ಹೆಚ್ಚಿನ ತಪಶೀಲಿಗೆ ಸ್ರ 1909ನೆ ಇಸವಿ ಜನವರಿ 7ನೆ ಮಕ್ರುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 3ನೆ ಪುಟದಲ್ಲಿ ಫಾಯಿಷ್ ಆಗಿರುವ ಇಸಿಹಾರ್ನಾಮೆಯನ್ನು ನೋಡಬಹುದು.)

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ನಲಮಂಗಲ ತಾಲ್ಲೂಕು ಕಸಬ ಹೋಬಳಿ ಕಾಯಂಗುತ್ತಾ ನಾರಾಯಣರಾವ ಪಾಳ್ಯ ಗ್ರಾಮವು 1909ನೆ ಇಸವಿ ಮಾರ್ಚಿ ಮಾಹೆ 23ನೆ ತಾರೀಖಿನಲ್ಲಿ ನಲಮಂಗಲ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಷರಾ—ಹೆಚ್ಚಿನ ಅಪ್ಪೀಲಿಗೆ ಸ್ರ 1909ನೆ ಇಸವಿ ಜನವರಿ ಮಾಹೆ 7ನೆ ಮಕ್ರುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 4ನೆ ಪುಟದಲ್ಲಿ ಫಾಯಿಷಾಗಿರುವ ಇಸ್ತಿಹಾರ್ನಾಮೆಯನ್ನು ನೋಡಬೇಕು.

ಬಿ. ಜೆ. ಕುಮಾರಸಾಮಿ ನಾಯಕ್,
ಡೆಪ್ಯುಟಿ ಕಮಿಷನರ್.